

## ಹದ್ದು ಮೀರಿರುವ ಮದ್ದಿನ ಬಳಕೆ

'ವಿಶ್ವ ಆರೋಗ್ಯ ಸಂಸ್ಥೆ'ಯ ಅಂದಾಜಿನಂತೆ ಇಂದು ಬಳಕೆಯಾಗುತ್ತಿರುವ ಔಷಧಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚನ್ನು ಅನಗತ್ಯವಾಗಿ ಅಥವಾ ಅನುಚಿತವಾಗಿ ಬರೆಯಲಾಗುತ್ತಿದೆ, ಮಾರಲಾಗುತ್ತಿದೆ ಅಥವಾ ನೀಡಲಾಗುತ್ತಿದೆ. ಶೇ. 90ರಷ್ಟು ಸಂದರ್ಭಗಳಲ್ಲಿ ಚುಚ್ಚುಮದ್ದುಗಳನ್ನು ಅನಗತ್ಯವಾಗಿ ನೀಡಲಾಗುತ್ತಿದೆ ಮತ್ತು ಅರ್ಧಕ್ಕರ್ಧ ರೋಗಿಗಳು ಔಷಧಗಳನ್ನು ಸರಿಯಾಗಿ ತೆಗೆದುಕೊಳ್ಳುವುದೇ ಇಲ್ಲ. ಸೋಂಕುಗಳನ್ನು ದಮನಿಸಿ ಜೀವವುಳಿಸುವ ಪ್ರತಿಜೈವಿಕಗಳನ್ನು ಮೂರರಲ್ಲೆರಡು ಪ್ರಕರಣಗಳಲ್ಲಿ ಅನಗತ್ಯವಾಗಿ ಬಳಸಲಾಗುತ್ತಿದೆ.

ಇಂದು ವೈದ್ಯರು ಅತಿ ಹೆಚ್ಚು ಬರೆಯುತ್ತಿರುವ 20 ಔಷಧಗಳಲ್ಲಿ 'ವಿಶ್ವ ಆರೋಗ್ಯ ಸಂಸ್ಥೆ'ಯು ಅತ್ಯಗತ್ಯವೆಂದು ಹೆಸರಿಸಿರುವ 433 ಔಷಧಗಳ ಪೈಕಿ ಎರಡಷ್ಟೇ (ಥೈರಾಯ್ಡ್ ಕ್ಷೀಣತೆಗೆ ಬಳಸುವ 'ಥೈರಾಕ್ಸಿನ್' ಹಾಗೂ ಅಸ್ತಮಾಕ್ಕೆ ಬಳಸುವ 'ಸಾಲ್‌ಬುಟಮಾಲ್') ಕಾಣಸಿಗುತ್ತವೆ. ಅತಿ ಹೆಚ್ಚು ವಹಿವಾಟಾಗುತ್ತಿರುವ ಔಷಧಗಳಲ್ಲಿ ಅತಿ ಹೊಸತಾದ, ಅತಿ ದುಬಾರಿಯಾದ, ಅತ್ಯಗತ್ಯವೇನಲ್ಲದ ಉರಿಯೂತ ನಿವಾರಕಗಳು ಮತ್ತು ಮಧುಮೇಹ, ರಕ್ತದ ಏರೊತ್ತಡಗಳಂಥ ಆಧುನಿಕ ರೋಗಗಳ ಔಷಧಗಳು ಮೊದಲೆರಡು ಸ್ಥಾನಗಳಲ್ಲಿವೆ. ಅಂದರೆ, ಅತ್ಯಗತ್ಯವೆನ್ನಲಾಗುವ ಔಷಧಗಳು ವೈದ್ಯರ ಲೇಖನಿಗಳಿಗೆ ಇಳಿಯುವುದಿಲ್ಲ ಮತ್ತು ಹೊಚ್ಚ ಹೊಸದಾದ, ಅತಿ ದುಬಾರಿಯಾದ ಔಷಧಗಳನ್ನು ವೈದ್ಯರಿಂದ ಬರೆಯಿಸಿ, ಅತಿ ಹೆಚ್ಚಿನ ವಹಿವಾಟು ಮಾಡಿಕೊಳ್ಳುವಲ್ಲಿ ಔಷಧ ಕಂಪನಿಗಳು ಯಶಸ್ವಿಯಾಗಿವೆ ಎಂದೇ ಅರ್ಥ.

ನಮ್ಮ ದೇಶದಲ್ಲೂ 378 ಅತ್ಯಗತ್ಯ ಔಷಧಗಳ 2016–18ರ ಹೊಸ ಪಟ್ಟಿಯನ್ನು ಪ್ರಕಟಿಸಲಾಗಿದೆ, ಆದರೆ, ಅದರಲ್ಲಿರುವ ಶೇ. 20–60ರಷ್ಟು ಅತ್ಯಗತ್ಯ ಔಷಧಗಳು ಸರ್ಕಾರಿ ಆಸ್ಪತ್ರೆಗಳಲ್ಲೇ ದೊರೆಯುವುದಿಲ್ಲ, ವೈದ್ಯರು ಶೇ. 36–75ರಷ್ಟು ಸಂದರ್ಭದಲ್ಲಿ ಅವನ್ನು ಬರೆಯುವುದೇ ಇಲ್ಲ. ಅಧ್ಯಯನಗಳನುಸಾರ, ಶೇ. 80ರಷ್ಟು ಸಂದರ್ಭಗಳಲ್ಲಿ ಆಧುನಿಕ ವೈದ್ಯರ ಸಲಹೆಗಳು ಸೂಕ್ತವಾಗಿಯೂ ವಿವೇಚನಾಪೂರ್ಣವೂ ಆಗಿರುವುದಿಲ್ಲ. ಆಧುನಿಕ ವೈದ್ಯವಿಜ್ಞಾನದ ಬಗ್ಗೆ ಏನೂ ಅರಿವಿಲ್ಲದೆಯೇ ಆಧುನಿಕ ಔಷಧಗಳನ್ನು ಮನಬಂದಂತೆ ಬಳಸುವ ಬದಲಿ ಯಾ ನಕಲಿ ಚಿಕಿತ್ಸಕರ ಸಮಸ್ಯೆಯು ಇನ್ನೂ


